ಮಾತನಾಡತೊಡಗಿದರು. ನೀವು ಯಾವುದಾದರೂ ಮಿಥಕವನ್ನು ತೆಗೆದುಕೊಂಡರೆ ಅದಕ್ಕೆ ಸಾವಿರಾರು ವರ್ಷಗಳ ಸ್ಮೃತಿಯಿರುತ್ತದೆ. ಅದೊಂದು ಭಾರದ ತರಹ ನನಗೆ ಕಾಣಿಸುತ್ತದೆ. ಯಾವುದು ಈಗಾಗಲೇ ಅರ್ಥವನ್ನು ಪಡೆದುಕೊಂಡಿಲ್ಲವೋ ಅದನ್ನು ಹಿಡಿಯಲು ನಾನು ಹಂಬಲಿಸಿದೆ. ಪುರಾಣಗಳಿಗೆ ಈಗಾಗಲೇ ಅನೇಕ ಅರ್ಥಗಳು ದಕ್ಕಿವೆ. ನಾನೇ ಹೊಲವನ್ನು ಹದಮಾಡಬೇಕು, ಬಿತ್ತಬೇಕು, ಬೆಳೆ ತೆಗೆಯಬೇಕು, ಅನ್ನವಾಗಿಸಬೇಕು, ಉಣ್ಣಬೇಕು. ಕಷ್ಟವೋ ಸುಖವೋ ಅಲ್ಲಿ ನನ್ನ ಬೆವರಿರಬೇಕು. ಇದು ನನ್ನ ಕಾವ್ಯ ನಂಬಿಕೆ. ಈಗಾಗಲೇ ರೂಪಿಸಲಾದ

> ನಾನೇ ಹೊಲವನ್ನು ಹದಮಾಡಬೇಕು, ಬಿತ್ತಬೇಕು, ಬೆಳೆ ತೆಗೆಯಬೇಕು, ಅನ್ನವಾಗಿಸಬೇಕು, ಉಣ್ಣಬೇಕು. ಕಷ್ಟವೋ ಸುಖವೋ ಅಲ್ಲಿ ನನ್ನ ಬೆವರಿರಬೇಕು. ಇದು ನನ್ನ ಕಾವ್ಯ ನಂಬಿಕೆ. ಯಾವುದು ಜನರ ಕಣ್ಣಿನಲ್ಲಿ ತೃಣ ಸಮಾನವೊ, ಕ್ಷುದ್ರವೊ ಅಲ್ಲೊಂದು ಮಹಾನತೆಯನ್ನು ನಾನು ಹುಡುಕ ಹೊರಟೆ.

ಮಿಥಕಗಳ ಜೊತೆ ಹೋಗಲು ನನಗೆ ಮನಸ್ಸಾಗಲಿಲ್ಲ. ಯಾಕೆಂದರೆ ಈಗಾಗಲೇ ಅದರಲ್ಲಿ ಒಂದು ರಚನೆಯಿರುತ್ತದೆ. ಮಿಥಕಗಳನ್ನು ಬಳಸಬಾರದಂತಲ್ಲ. ಅದು ಅವರವರ ಸೃಜನಶೀಲತೆಗೆ ಬಿಟ್ಟದ್ದು. ಆದರೆ ನನಗೆ ಅದು ಒಗ್ಗುವುದಿಲ್ಲ. ಅದಕ್ಕೆ ಇಷ್ಟೆಲ್ಲ ನಿರೂಪಿಸಬೇಕಾಯಿತು. ಏನೂ ಇಲ್ಲದ ಸ್ಥಳದಿಂದ ನೀರು ಉಕ್ಕಿಸಬೇಕಲ್ಲ. ಇದು ನಿಜಕ್ಕೂ ಕಠಿಣ ಮಾರ್ಗ. ಕಣ್ಣೆದುರಿನ ಜೀವನವೇ ಮಹಾಕಾವ್ಯವಾಯಿತು. ನನಗೆ ಮಹಾಕಾವ್ಯದಲ್ಲಿ ಹುಡುಕಬೇಕು ಅನಿಸಲಿಲ್ಲ. ಈ ಜೀವನವನ್ನೇ ಮಹಾಕಾವ್ಯವಾಗಿಸಬೇಕು ಅನ್ನಿಸಿತು. ಯಾವುದು ಜನರ ಕಣ್ಣಿನಲ್ಲಿ ತೃಣ ಸಮಾನವೊ, ಕ್ಷುದ್ರವೊ ಅಲ್ಲೊಂದು ಮಹಾನತೆಯನ್ನು ನಾನು ಹುಡುಕ ಹೊರಟೆ.

**◆ ನೀವು ಹಿಂದಿಯ ಪ್ರಖ್ಯಾತ ಕವಿ ಶಮಶೇರ್‌ಸಿಂಗ್ ಬಹಾದ್ದೂರ ಅವರ ಬಗ್ಗೆ ಬಹಳ ಮುಖ್ಯವಾದ ಲೇಖನ ಬರೆದಿರುವಿರಿ. ಶಮಶೇರ್ ಎಂಥ ಕವಿಯೆಂದರೆ, ಅವರು ಒಂದು ನದಿಯ ಹಾಗೆ. ಆದರೆ ಆ ನದಿಗೆ ಯಾರೂ ಸೇತುವೆ ಕಟ್ಟಲಾಗುವುದಿಲ್ಲ ಅನ್ನೋ ಅರ್ಥದಲ್ಲಿ. ಹಾಗೆಂದರೆ ಏನರ್ಥ?**

ಈಗ ಬರೆಯಬೇಕಾಗಿದ್ದರೆ ಬಹುಶಃ ನಾನು ಇಂಥ ಶೀರ್ಷಿಕೆ ಕೊಡುತ್ತಿರಲಿಲ್ಲವೇನೊ. ತಾರುಣ್ಯದ ಸಮಯದಲ್ಲಿ ಸ್ವಲ್ಪ ಈ ತರಹದ ಶೀರ್ಷಿಕೆಗಳು ಹೆಚ್ಚು ಹೊಳೆಯುತ್ತವೆ. ಅಂದರೆ ಎದುರಿನವರನ್ನು ಕಕ್ಕಾಬಿಕ್ಕಿ ಆಗಿಸಬೇಕು ಎಂಬ ಉಮೇದು ಹೆಚ್ಚಿರುತ್ತದೆ. ಈಗ ಕೊಂಚ ಹಿಂತಿರುಗಿ ನೋಡುವುದಾದರೆ, ಶಮಶೇರ್ ಆ ಕಾಲದಲ್ಲಿ ಅಷ್ಟು ಪ್ರಭಾವಶಾಲಿ ಕವಿ ಆಗಿರಲಿಲ್ಲ. ಕಾಲ ಕಳೆದಂತೆ ಅವರ ಮಹತ್ವ ನಮಗೆಲ್ಲ ಅರಿವಾಯಿತು. ಆಗ ಬಾಬಾ ನಾಗಾರ್ಜುನ ಹೆಚ್ಚು ಪ್ರಭಾವಶಾಲಿ ಕವಿಯಾಗಿದ್ದರು. ಮುಕ್ತಿಬೋಧ್ ಕೂಡ ಪ್ರಭಾವಶಾಲಿ ಕವಿ ಆಗಿದ್ದರು. ಶಮಶೇರ್ ಒಂದು ನದಿ ಅಂತ ನಾನು ಹೇಳಿದೆ. ಯಾಕೆಂದರೆ, ನಾವು ಈ ನದಿಯನ್ನು ವ್ಯಾವಹಾರಿಕ ಉದ್ದೇಶಕ್ಕಾಗಿ ಬಳಸಲು ಸಾಧ್ಯವಿಲ್ಲ ಅನ್ನೋ ಅರ್ಥದಲ್ಲಿ. ನೀವು ಸೇತುವೆ ನಿರ್ಮಿಸಿದರೆ ಈ ಕಡೆಯಿಂದ ಆ ಕಡೆ ಚಲಿಸುವಿರಿ. ವ್ಯವಹಾರಿಕ ಅಥವಾ ವ್ಯಾಪಾರಿ ಮನೋಭಾವ ಅಲ್ಲಿರುತ್ತದೆ. ಆದರೆ ಶಮಶೇರ್ ಕಾವ್ಯ ಎಷ್ಟು ದಟ್ಟ ಮತ್ತು ಸಾಂದ್ರವಾಗಿದೆಯೆಂದರೆ ಅದನ್ನು ಅಂದೂ ಮತ್ತು ಇಂದೂ ಕೂಡ ವ್ಯವಹಾರಿಕ ಉದ್ದೇಶಗಳಿಗಾಗಿ ಬಳಸಲು ಸಾಧ್ಯವಿಲ್ಲ. ಆ ನದಿ ನಿಮ್ಮ ಪಕ್ಕದಲ್ಲಿಯೇ ಇದೆ. ಅದು ನಿಮಗೆ ಏನೇನೊ ಸೂಚನೆಗಳನ್ನು ಕೊಡುತ್ತದೆ. ಆದರೆ ನಿಮ್ಮ ಲಾಭಕ್ಕಾಗಿ ಒದಗಿಬರುವುದಿಲ್ಲ. ಎಲ್ಲಾ ಭಾಷೆಯಲ್ಲೂ ಕೆಲ ಕವಿಗಳು ಹಾಗಿರುತ್ತಾರೆ. ಅವರನ್ನು ವ್ಯವಹಾರಿಕ ಲಾಭಕ್ಕಾಗಿ ಬಳಸಲಾಗುವುದಿಲ್ಲ. ಅಥವಾ ಯಾವುದೇ ತರಹದ ಲಾಭಕ್ಕಾಗಿ ಅವರು ಒದಗುವುದಿಲ್ಲ. ಆದರೆ ನಿಮ್ಮನ್ನು ನಿರಂತರ ನೈತಿಕವಾಗಿ ಕೆಣಕುತ್ತಲೇ ಇರುತ್ತಾರೆ.